ಮುಳ್ಳುಗಳನ್ನು ಪುಷ್ಪಸದೃಶವಾಗಿ ಮನಸ್ಸಿನಲ್ಲಿ ತಿಳಿದುಕೊಂಡುದರಿಂದಲೇ ದಿನ ಸಾಗಲಾರದು, ಬದುಕು ನಡೆಯಲಾರದು. ಕಲ್ಪನಾಲೋಕಕ್ಕೂ ವಾಸ್ತವ ಬದುಕಿಗೂ ಇರುವ ಅಂತರ ಕಡಿಮೆಯಾಗದೆ ಹೋದರೆ ನಾವು ಸುಖ ಸ್ವಪ್ನ ಕಥಾನಕಗಳನ್ನು ಹೇಳಬಲ್ಲೆವೇ ಹೊರತು ಬದುಕಿನ ಅರ್ಥವನ್ನು ತಿಳಿಯಲಾರೆವು; ಹೇಳಲಾರೆವು.

ನಾವು ದುಡಿಯುತ್ತಿರುವ ಕ್ಷೇತ್ರ ಗದ್ಯವಿರಲಿ, ಪದ್ಯವಿರಲಿ ಅದು ಸಾಕಷ್ಟು ಆಳವಾದ ಬದುಕಿನ ಅನುಭವಗಳಿಂದ ಪ್ರೇರಣೆಗೊಳ್ಳದೆ, ಹೊರಡುವ ಕಲ್ಪನಾವಿಲಾಸವಾದರೆ ಅದಕ್ಕೆಷ್ಟು ಬೆಲೆ? ಇಂದು, ಕಾದಂಬರಿಗಳ ಮಹಾಪೂರವೇ ಕಾಣಿಸುತ್ತಿರುವ ಈ ಕಾಲದಲ್ಲಿ ನಾನು ಈ ಸಂಗತಿಯನ್ನು ಇನ್ನಷ್ಟು ಒತ್ತಿ ಹೇಳಿದರೂ ತಪ್ಪಿಲ್ಲ. ಕನ್ನಡದ ಮುನ್ನಡೆ ನಮ್ಮ ಜನಸಂಖ್ಯೆಯ ಮಾನದಿಂದ ಹೇಗೆ ಸಿದ್ಧವಾಗುವುದಿಲ್ಲವೋ, ಪುಟ, ಪುಸ್ತಕಗಳ ಸಂಖ್ಯೆ ಬೆಡಗಿನ ಶಿರೋನಾಮೆ ರಕ್ಷಾಪತ್ರಗಳಿಂದಲೂ ಅದು ಸಿದ್ಧವಾಗುವುದಿಲ್ಲ. ತನ್ನ ಸತ್ವದಿಂದ, ಸತ್ಯದಿಂದ, ಸೌಂದರ್ಯದಿಂದ ಅದರ ಯೋಗ್ಯತೆ ನಿರ್ಮಾಣವಾಗಬೇಕು. ಆತ್ಮಪ್ರಶಂಸೆಯಿಂದಲ್ಲ; ಉಭಯಕುಶಲೋಪರಿ ಸಾಂಪ್ರತದಿಂದಲ್ಲ.

ಮುಂಬಯಿಯಂಥ ನಗರದಲ್ಲಿ ತಿರುಗಾಡಿದವನಿಗೆ, ಫ್ಲೋರಾಸ್ ರೋಡಿನಂತಹ ಕೆಲವೊಂದು ಬೀದಿಗಳು ನಮ್ಮ ಜನಜೀವನದ ನೀಚಮಟ್ಟವನ್ನು ಹೇಗೆ ತೋರಿಸುತ್ತವೆಯೋ, ಹಾಗೆಯೇ ಇಂದು ಪುಸ್ತಕದ ಅಂಗಡಿಗಳಲ್ಲಿ ಪ್ರದರ್ಶಿಸಲ್ಪಡುವ ಕಾದಂಬರಿ ಕತೆಗಳೂ, ರಕ್ಷಾಪತ್ರಗಳೂ, ಬಣ್ಣದ ಚಿತ್ರಗಳೂ ಅದನ್ನೇ ಹೇಳುತ್ತಿವೆ. ಇದನ್ನು ಕಂಡು, ಹೆಮ್ಮೆಪಡುವವರೂ ಇದ್ದಾರೆ. ಪಾಶ್ಚಾತ್ಯ ಮಹಾನುಭಾವರ ಶ್ಲೋಕಗಳನ್ನು ಉದ್ಧರಿಸುವವರೂ ಇದ್ದಾರೆ. ಶೀಲ ಅಶ್ಲೀಲಗಳ ಮಹಾ ವ್ಯಾಖ್ಯೆಯನ್ನೇ ಬರೆಯುವವರಿದ್ದಾರೆ. ವ್ಯಭಿಚಾರದಿಂದಲೇ ಜೀವನ ಸಾಗಿಸುತ್ತಿರುವ ಒಬ್ಬಳಿಗೆ ನೀತಿಯ ಉಪದೇಶ ಹೇಗೆ ಅಪಥ್ಯವೋ, ಅಥವಾ ಹೇಗೆ ವ್ಯರ್ಥವೋ, ಹಾಗೆಯೇ ಇಂಥ ಸ್ವಸಮರ್ಥನೆಗಳು.

* * *

ಸಾಹಿತ್ಯದಲ್ಲಿ ರುಚಿ ಹೇಗೆ ಬೇಕೋ, ಹಾಗೆ ಶುಚಿಯೂ ಬೇಕು. ಕದ್ದು, ಮರೆಯಲ್ಲಿ, ತಮ್ಮವರಿಂದ ಅಡಗಿ ಕುಳಿತು ಓದುವ ಸಾಹಿತ್ಯ, ರುಚಿಯಾದ ಸಾಹಿತ್ಯವಾಗಿರಬಹುದು. ಅದಂತೂ ಶುಚಿಯಾದ ಸಾಹಿತ್ಯದ ಲಕ್ಷಣವಲ್ಲ.

ಸಾಹಿತಿಯಾದವನು 'ನೀತಿ-ಅನೀತಿ'ಗಳನ್ನು ಮೀರಿದ ದೃಷ್ಟಿಯುಳ್ಳವನಾಗಬೇಕು ಎಂದೆ. ಈ ಅನೀತಿ ವರ್ತನೆ ಅಷ್ಟು ಸುಲಭವಲ್ಲ. ಬೇರಿಬ್ಬರ ಜಗಳದಲ್ಲಿ ನಾವು ಪಕ್ಷಾತೀತರಾಗಬಹುದು. ಆದರೆ ನಮ್ಮ ಬದುಕಿನಲ್ಲೇ ಲೈಂಗಿಕ ಅನುರಾಗಗಳಿವೆ. ಇತರ ಅನುರಾಗಗಳಿವೆ; ಸೆಳೆವುಗಳಿವೆ; ಭಯಗಳಿವೆ; ಆಸೆಗಳಿವೆ. ಜೀವನವನ್ನು ಕೆಣಕುವ ಇತರ ಅನೇಕ ಸಮಸ್ಯೆಗಳಿವೆ. ಇದರಿಂದಾಗಿ ನಾವು ನಮ್ಮ ಪಾಲಿಗೆ ಉದಾರಿಗಳಾಗಿ, ನಮ್ಮ ದೃಷ್ಟಿಗೆ, ತಪ್ಪುಗಳಿಗೆ ಕ್ಷಮೆನೀಡಿ, ಲೋಕದ ತಪ್ಪು ಒಪ್ಪುಗಳ ತೀರ್ಮಾನಕ್ಕೆ ಹೊರಡುವ ಸಂಭವ ಹೆಚ್ಚಾಗಿದೆ. ತಮ್ಮ ಸಾಹಿತ್ಯದಿಂದ ಲೋಕವನ್ನು ಉದ್ಧರಿಸಲು ಹೊರಡುವ ಮಹಾನುಭಾವರಲ್ಲಿ ಇಂಥ ಗುಣ ಇನ್ನೂ ಹೆಚ್ಚು.

ನಮ್ಮ ಬರವಣಿಗೆ, ಸಾಹಿತ್ಯ ಇತರರಿಗೆ ಒಂದಲ್ಲ ಒಂದು ವಿಧದಿಂದ ತಿಳಿವು, ನೆಮ್ಮದಿ, ಸುಖ ಸಮಾಧಾನಗಳನ್ನು ತಂದುಕೊಡಬೇಕಾದರೆ, ವಿರಸದಿಂದಾಗುವ ದುಃಖ ತಪ್ಪಿಸಬೇಕಾದರೆ, ಸರಸದಿಂದಾಗುವ ಸುಖ ಹೆಚ್ಚಿಸಬೇಕಾದರೆ ಮೊದಲಿಗೆ ಅವು ನಮ್ಮ ಬದುಕನ್ನೇ ಬೆಳಗಿಸಿರಬೇಡವೆ? ನಮ್ಮ ದೃಷ್ಟಿಯನ್ನು ವಿಶಾಲಿಸುವಂತೆ ಮಾಡಿರಬೇಡವೆ? ತನಗಲ್ಲದ ಉಪದೇಶ ಪರರಿಗೇನು?

ಒಟ್ಟಿನಲ್ಲಿ ಹೇಳುವಲ್ಲಿ ನಾವು ಬೆಳೆಯದೆ ದೊಡ್ಡವರಾಗದೆಯೇ ನಮ್ಮ ನುಡಿ ಇಲ್ಲವೆ ಸಾಹಿತ್ಯ ದೊಡ್ಡದಾದೀತು, ಬೆಳೆದೀತು ಎಂದು ನಾನು ನಂಬುವುದಿಲ್ಲ.

ಇನ್ನು ಕನ್ನಡ ಭಾಷೆಯ ಮೂಲಕ ನಾವು ಜನಕ್ಕೆ ಸಲ್ಲಿಸಬಹುದಾದ ಸೇವೆಗಳನ್ನು ಕುರಿತು ನಾಲ್ಕು ಮಾತು ಹೇಳುತ್ತೇನೆ. ಅದಕ್ಕಿಂತ